# ಅಧ್ಯಾಯ 17

ಓಂ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ



ಛಂದ: ನಿರ್ವಿಶೇಷ ಪ್ರಕಾಶನೇ ಸದ್ಗುರುವೆ ಸಿದ್ಧಾರೂಢನೇ | ಉರ್ವಿಯೊಳು ಅಸಮಾನನಿರುವ ಜ್ಞಾನ ನಿತ್ಯ ನಿಗೂಢನೇ ಜಂಗಮರು ಗುರುನಿಂದೆ ಮಾಡಿದರಿಂದ ಲಿಂಗವ ಕಳೆದರು |ಲಿಂಗರೂಪನೆ ಆದ ಸಿದ್ದಗೆ ಶರಣು ಬಂದೇ ಪಡೆದರು..

ಕರುಣಾಸಾಗರನಾದ ಸದ್ಗುರುವೆ, ನಿನಗೋಸ್ಕರ ನಮಸ್ಕಾರವಿರಲಿ. ನಿನಗೆ ಯಾವತನು ಶರಣು ಬಂದಿಲ್ಲವೋ ಆತನು ವ್ಯರ್ಥವಾಗಿ ಕೆಟ್ಟು ಹೋಗುವನು, ಎಂಬುದರಿಂದ ನೀನು ಅಜ್ಞ ಜನರನ್ನು ತಾರಣ ಮಾಡುವದಕ್ಕಾಗಿ ಬಹು ಉಪಾಯಗಳನ್ನು ಮಾಡುವಿ. ಈ ದೆಸೆಯಿಂದ ಅನೇಕ ಉತ್ಸವಗಳ ಉತ್ಪತ್ತಿಯನ್ನು ಮಾಡಿ, ಆ ಕಾಲದಲ್ಲಿ ಮನೋಹರವಾದ ವಸ್ತು ಸಂಪತ್ತಿಗಳನ್ನಿಟ್ಟು, ಅವನ್ನು ನೋಡಲಿಕ್ಕೆ ಅಜ್ಞಾನಿ ಜನರು ಬಂದಾಗ ಅವರನ್ನು ಉದ್ಧರಿಸುವಿ. ನಿನ್ನ ದರ್ಶನ ಸ್ಪರ್ಷನಗಳಿಂದ ಅನಂತ ಜನ್ಮಗಳ ಪಾಪವು ಕ್ಷಣದಲ್ಲಿ ಹೋಗುತ್ತದೆ. ನಿನ್ನ ಸೇವಾ ಘಟಸಿತೆಂದರೆ, ಭಯದಿಂದ ವಿಷಯ ಸಂಸ್ಕಾರಗಳು ಅಡಗಿ ಹೋಗುತ್ತವೆ. ಕ್ಷಣ ಕ್ಷಣಕ್ಕೆ ನಿನ್ನ ಚಿಂತನ ಮಾಡುತ್ತಿರುವುದರಿಂದ, ಕಾಮ ಕ್ರೋಧಗಳು ಹೇಳಹೆಸರಿಲ್ಲದಂತಾಗುವವು. ಸದ್ಗುರು ಸನ್ನಿಧಿಯಲ್ಲಿ ಬಂದ ಕೂಡಲೇ, ಲೋಭ ಮೋಹಗಳು ಜಿಗಿದು ಓಡಿ ಹೋಗುತ್ತವೆ. ಅಲ್ಲಿ ಮದ ಮತ್ಸರಗಳಿಗೆ ಯಾರು ಕೇಳಬೇಕು ? ಮಠಕ್ಕೆ

ಹೊರಟಾಗ ಅವು ಮನೆಯಲ್ಲಿಯೇ ಉಳಿವವು. ಈ ಪ್ರಕಾರ ಷಡ್ರಿಪುಗಳ ಆಟವು ಇಲ್ಲಿ ಲೇಶಮಾತ್ರವೂ ನಡಿಯಲಾರದು. ಈ ಸ್ಥಾನದಲ್ಲಿ ಆನಂದದ ತೆರೆಗಳು ಬರುತ್ತವೆ. ಅದರೊಳಗೆ ಭಕ್ತ ಜನರು ಇಲ್ಲಿ ಲೇಶಮಾತ್ರವೂ ನಡಿಯಲಾರದು.ಈ ಸ್ಥಾನದಲ್ಲಿ ಆನಂದದ ತೆರೆಗಳು ಬರುತ್ತವೆ. ಅದರೊಳಗೆ ಭಕ್ತ ಜನರು ಸ್ನಾನ ಮಾಡಿ "ಇಲ್ಲಿಯೇ ನಿಜವಾದ ಆನಂದವು ಇದೆ - ಇನ್ನು ಮನೆಗೆ ಹೋಗಲಾರೆವು ", ಎಂದು ಅನ್ನುವರು. ಈ ರೀತಿಯಲ್ಲಿ ನಿರ್ವಿಷಯ ಸುಖದ ಸಂಸ್ಕಾರಗಳು ಹತ್ತುವವು . ಅದರಿಂದ ಸಂಸಾರವು ದುಃಖಮಯ ಅನಿಸುವುದು. ಇಂಥಾದ್ದರೊಳಗಿಂದ ಹ್ಯಾಗೆ ಪಾರಾಗಬೇಕೆಂಬುವದೇ ದೊಡ್ಡ ಚಿಂತೆಯು, ಸರ್ವಾಂಗವು ವೈರಾಗ್ಯದಿಂದ ತುಂಬಿ, ಮನಸ್ಸಿಗೆ ಸಂಸಾರ ಉದ್ವೇಗ ಉಂಟಾಗಿ, ಶೀಘ್ರವಾಗಿ ಸದ್ಗುರುಗಳಿಗೆ ಶರಣು ಹೋಗುವವರನ್ನು ಆ ಸದ್ಗುರುವು ಸ್ವೀಕರಿಸುತ್ತಾನೆ. ಸದ್ಗುರುವು ಸ್ವೀಕರಿಸಿದನೆಂದರೆ, ತತ್ಕಾಲವೇ ಅವರ ದುಃಖವು ಹಾರಿಹೋಗುವುದು, ಆ ದುಃಖವು ಯಾವುದೆಂದರೆ, - ಎಲ್ಲಾ ಪ್ರಾಣಿಗಳಿಗಿರುವ ಜನ್ಮ ಮರಣ ರೂಪವೇ ಆಗಿರುತ್ತದೆ. ಇಂಥಾ

ದಯಾಳುವಾದ ಸದ್ಗುರುನಾಥನೇ, ಎಲ್ಲಾ ಜನರನ್ನು ತಾರಿಸುವದಕ್ಕಾಗಿಯೇ, ನೀನು ಈ ಆಟವನ್ನು ಹೂಡಿರುವಿ. ಬಂದವರ ಗುಣದೋಷಗಳನ್ನು ನೋಡದೆ ನೀನು ತಾರಿಸುವದರಲ್ಲಿಯೇ ರತನಾಗಿರುತ್ತಿ. ಈಗ ಸುರಸವಾದ ಕಥೆಯನ್ನು ಕೇಳುವಂಥವರಾಗಿರಿ. ಒಮ್ಮೆ ಶಿವರಾತ್ರಿ ಉತ್ಸವ ಕಾಲದಲ್ಲಿ, ಆ ವಿಶೇಷ ವೈಭವ ನೋಡುವದರ ಸಲುವಾಗಿ ಸಿದ್ಧಾಶ್ರಮದಲ್ಲಿ ಬಹು ಜನರ ಸಂದಣಿ ಕೂಡಿತ್ತು. ಮಠದ ಎದುರಿನ ಕೆರೆಯ ಸಮೀಪ

ಈ ದಿನ್ನೆಯ ಮೇಲೆ ನಾಲ್ಕು ಮಂದಿ ಅಯ್ಯನವರು ವೃಕ್ಷ ಛಾಯೆಯೊಳಗೆ ಪರಸ್ಪರ ಮಾತಾಡುತ್ತಾ ಕುಳಿತಿದ್ದರು. ಪ್ರತಿ ಒಬ್ಬರ ವಕ್ಷಸ್ಥಳದ ಮೇಲೆ ಬೆಳ್ಳಿಯ ಲಿಂಗ ಸಂಪುಷ್ಟವು ಶೋಭಿಸುತ್ತಿದ್ದು, ಹಣೆ ಮೇಲೆ ವಿಭೂತಿ ಧಾರಣೆ ಮಾಡಿದ್ದರು. ಮೊದಲನೆಯವನನ್ನುತ್ತಾನೆ - "ನೋಡಿರಿ, ಈ ಆರೂಢನು ನಿಜವಾಗಿ ಮಹಾ ಮೂಢನಿದ್ದಾನೆ. ಇವನು ಎಷ್ಟೋಂದು ಡೌಲು ಮಾಡುತ್ತಾನೆ! ಈತನ ಬುದ್ಧಿ ಜಡವಾಗಿರುತ್ತದೆ", ಎರಡನೆಯವನು ನುಡಿಯುತ್ತಾನೆ- “ಇವನು ಲಿಂಗವಿಲ್ಲದ

ಭವಿಯಾಗಿದ್ದು, ಈ ಮೂರ್ಖ ಜನರು ಇವನನ್ನು ಕಂಡ ಕೂಡಲೇ ಕಾಲಿಗೇ ಬೀಳುತ್ತಾರೆ. ಇವರಿಗೆ ವಿವೇಕವೆಂಬುದು ಇಲ್ಲೇ ಇಲ್ಲ. ನಾವು ಶ್ರೇಷ್ಠ ಗುರುಗಳು. ನಾವು ಜಂಗಮರು ಪೂಜಾರ್ಹರೆಂದು ಶಾಸ್ತ್ರವು ಸ್ಪಷ್ಟವಾಗಿ ಹೇಳುತ್ತದೆ. ಹೀಗಿದ್ದು ಈ ಲಿಂಗಾಯತರು ಸಹಾ ಸಿದ್ಧನ ಕಾಲಿಗೆ ಬಿದ್ದು, ಭ್ರಷ್ಟರಾಗಿ ಹೋಗುವುದನ್ನು ನೋಡಿ ನೋಡಿ, ನನ್ನ ಜೀವಕ್ಕೆ ಬಹಳ ಕಷ್ಟವಾಗುತ್ತದೆ. ಮೂರನೆಯವನು ಅನ್ನುತ್ತಾನೆ - "ಮೊನ್ನೆ ಮೊನ್ನೆ, ನಾಲ್ಕು ಮಂದಿ ಮುಸಲ್ಮಾನರು ಇವನಿಗೆ ಚೆನ್ನಾಗಿ ಹೊಡೆದರು. ಇವನು ಏನೇನೂ ಮಾತನಾಡದೇ ಸುಮ್ಮನೇ ಕುಳಿತುಬಿಟ್ಟನು. ಇವತ್ತು ಡೌಲು ಮಾಡಿ ರಥದ ಮೇಲೆ ಕೂಡ್ರುವನು. ಇವನಿಗೆ ಅಣುಮಾತ್ರ ನಾಚಿಕೆ ಇಲ್ಲ. ಇವನಿಗೆ ಎಷ್ಟು ನಾಚಿಕೆಗೇಡು ಅನ್ನಬೇಕು. ನೀವೇ ಹೇಳಿರಿ, ಗೆಳೆಯರೇ." ಆಗ ನಾಲ್ಕನೇಯವನು ನುಡಿಯುತ್ತಾನೆ, - "ಈಗ ನಾಲ್ಕು ತಿಂಗಳ ಹಿಂದೆ ಒಂದು ದಿನ ಸಂಜೆ ಹೊತ್ತಿಗೆ, ನಾನು ಚಿದ್ಘನಾನಂದ ಸಮಾಧಿಗೆ ಹೋಗಿ, ಒಂದು ಮೋಜು ಮಾಡಿದೆ. ಸಿದ್ದನು ಕಟ್ಟೇ ಮೇಲೆ ಕುಳಿತಿದ್ದನು. ನಾನು ಮೆಲ್ಲಗೆ

ಅವನ ಹಿಂದಿನಿಂದಲೇ ಬಂದು, ಎರಡೂ ಕೈಗಳಿಂದ ಅವನನ್ನು ಮೇಲಕ್ಕೆ ಎತ್ತಿ, ಭೂಮಿಗೆ ಅಪ್ಪಳಿಸಿ ಬಿಟ್ಟೆ. ಅವರು ಸತ್ತ ಕಪ್ಪೆಯಂತೆ ನೆಲಕ್ಕೆ ಬಿದ್ದನು. ಹೀಗೆ ಆ ಭವಿಗೆ ಯೋಗ್ಯ ಶಿಕ್ಷೆ ಮಾಡಿದೆನು". ಹೀಗೆಂದು ಖೋ ಖೋ ಖೋ, ನಕ್ಕನು. ಆಗ್ಗೆ ಆ ಪ್ರಥಮ ಅಯ್ಯನು ಅಂದದ್ದೇನೆಂದರೆ, -"ಹೀಗೆ ನಿಜವಾಗಿ ನೀನು ಬಹಳ ಕೆಟ್ಟ ಕೆಲಸ ಮಾಡಿದಿ. ಆತನಿಗೆ ಈ ಪ್ರಕಾರ ಘಾತ ಮಾಡದೆ, ಬೋಧಿಸಿ ಒಳ್ಳೆ ಮಾರ್ಗಕ್ಕೆ ತರಬೇಕಿತ್ತು. ಈ ದುಷ್ಟ ಕರ್ಮದ ಫಲವಾಗಿಯೇ ನಿನ್ನ ಹೆಂಡತಿ ಮಕ್ಕಳು ಸತ್ತು ಹೋದರು, ಮತ್ತು ನೀನು ದಿಕ್ಕಿಲ್ಲದೆ ಪಿಶಾಚಿಯಂತೆ ತಿರುಗುತ್ತಿರುವಿ. ಜಗಕ್ಕೆಲ್ಲ ನಿಂದ್ಯ ಆದಿ", ಅದಕ್ಕೆ ನಾಲ್ಕನೆಯವನು - "ಸಾಯುವವರು ಸಹಜವಾಗಿ ಸಾಯುವರು. ಅದರೊಳಗೆ ಈ ಹುಚ್ಚನ ಮಹತ್ವವೇನು. ಅವನಿಗೆ ನಾನು ತಕ್ಕ ಶಿಕ್ಷಾ ಮಾಡಿದೆ, ಇದೇ ನನ್ನ ಮನಸ್ಸಿಗೆ ಸಮಾಧಾನವು", ಅಂದನು. ಆಗ ಎರಡನೇಯವನು ಎನ್ನುತ್ತಾನೆ - "ನೆಡಿಯಿರಿ, ನೋಡೋಣ, ಅವನ ತಲೆಗೆ ಕಿರೀಟಾ ಹಾಕಿ ಪೂಜಾ ಮಾಡುತ್ತಾರಂತೆ." ಕೂಡಲೇ, ಆ

ನಾಲ್ಕು ಮಂದಿ ಅಯ್ಯನವರು ಮಠದ ಕಡೆಗೆ ಹೊರಟರು. ದಾರಿಯಲ್ಲಿ ಹಿರೇಮಠದ ಪಟ್ಟದಪ್ಪನವರು,ಮತ್ತು ಅವರ ಕೂಡ ಇತರ ಕೆಲವು ಮಂದಿ ಅಯ್ಯನವರು ಭೆಟ್ಟಿಯಾದರು. ಪುಟ್ಟಪ್ಪನವರು ಮೊದಲನೇ ಆಯ್ಯನನ್ನು ನೋಡಿ - "ಯಾಕೋ ರುದ್ರಯ್ಯ, ನಿನ್ನ ಲಿಂಗ ಎಲ್ಲಿ ಇದೆ?" ಅಂದರೂ. ಅದಕ್ಕಾ ತನು - “ಇಲ್ಲೇ ಇದೆ ಅಲ್ಲ,” ಎಂದು ವಕ್ಷಸ್ಥಳಕ್ಕೆ ಮುಟ್ಟಿ ನೋಡಿದರೆ, ಅಲ್ಲಿ ಚೌಕವಿದ್ದಿಲ್ಲ. ಇದು ನೋಡಿ ಆಶ್ಚರ್ಯ ಪಟ್ಟು, ಮೈ ಮೇಲೆ ಎಲ್ಲಿ ಸವರಿ ನೋಡಿದರೂ ಕಾಣಿಸಲಿಲ್ಲ. ಅವನ ಸಂಗಡ ಇದ್ದ ಇತರ ಅಯ್ಯನವರು ಸಹಾ ತಮ್ಮ ತಮ್ಮ ವಕ್ಷಸ್ಥಳವನ್ನು ನೋಡುತ್ತಾರೆ - ಅವರ ಲಿಂಗದ ಚೌಕಗಳೂ ಇದ್ದಿಲ್ಲ. ಎಲ್ಲರಿಗೂ ಆಶ್ಚರ್ಯವಾಗಿ, ತಾವು ಬಂದ ದಾರಿಯಲ್ಲೆಲ್ಲಾ ಹುಡುಕುತ್ತಾ ಹೋದರು. ಆದರೆ ಬೆಳ್ಳಿ ಸಂಪುಷ್ಟಗಳು ಎಲ್ಲೆಲ್ಲಿಯೂ ಕಾಣಲಿಲ್ಲ. ಆಗ ಬಹು ಖಿನ್ನ ಮನಸ್ಸಿನಿಂದ ತಿರುಗಿ ಬಂದರು. ಆಗ್ಗೆ ಪುಟ್ಟದಪ್ಪನವರಂದರು, “ನೀವು ಇಷ್ಟ ಲಿಂಗಗಳನ್ನು ಕಳೆದುಕೊಂಡಿರಿ. ಈಗ ನೀವು ಪ್ರಾಣವನ್ನೇ ತ್ಯಜಿಸಬೇಕಾಗುತ್ತದೆ." ಇದನ್ನು ಕೇಳಿ ಅವರು

ಅತ್ಯಂತ ವಿಮನಸ್ಕರಾದರು. ರುದ್ರಯ್ಯನಂದನು, - "ಇದೇ ಈಗ ನಮ್ಮೆಲ್ಲರ ವಕ್ಷಸ್ಥಳದ ಮೇಲೆ ನಾನು ಲಿಂಗಗಳನ್ನು ನೋಡಿದ್ದೆನು. ಅಷ್ಟರೊಳಗೆ ಏನಾದವನ್ನಬೇಕು ?" ಅದಕ್ಕೆ ಪಟ್ಟದಪ್ಪನವರಂದರು - "ನಿಮಗೆ ಹೀಗೆ ಯಾಕಾಯಿತು ? ಶಿವನಿಂದೆಯಾಗಲಿ ಸಾಧುನಿಂದೆಯಾಗಲಿ ಘಟಿಸಿದ್ದಾದರೆ, ಇಂಥಾ ದೂಷಿತ ಸ್ಥಿತಿ ಪ್ರಾಪ್ತವಾಗುವದು", ಅದಕ್ಕೆ ರುದ್ರಯ್ಯನಂದನು - "ನೀವು ಅನ್ನುವದು ಸತ್ಯವಾಗಿದೆ. ನಮ್ಮಿಂದ ದುರ್ಧರವಾದ ಅಪರಾಧ ಘಟಿಸಿದ್ದು ನಿಜವು. ವ್ಯರ್ಥವಾಗಿ ಈಗ ಯಾಕೆ ಹೇಳಲಿ", ಆಗ ಪಟ್ಟದಪ್ಪನವರಂದರು - "ನಡೆದ ಸಂಗತಿಯನ್ನು ಗುಪ್ತ ಮಾಡಿ ಉಪಯೋಗವಿಲ್ಲ, ಹೇಳು ಅದಕ್ಕೇನಾದರೂ ಉಪಶಮನ ಮಾಡೋಣ. ಶಿವದೂಷಣ ಮಹತ್ ಪಾಪವು". ಆಗ್ಗೆ ರುದ್ರಯ್ಯನು, ನಾಲ್ಕೂ ಮಂದಿ ಕೂಡಿ, ಮಾಡಿದ ಸಂಭಾಷಣವನ್ನು ಸವಿಸ್ತಾರವಾಗಿ ನಿವೇದಿಸಿದನು. ಇತರ ಅಯ್ಯನವರು ಚಿತ್ತದಲ್ಲಿ ಅನುತಾಪ ಹೊಂದಿ ಏನು ಮಾತಾಡಲಾರದೆ, ಸುಮ್ಮನೆ ತಲೆ ಬಗ್ಗಿಸಿ ನಿಂತರು. ಆಗ್ಗೆ

ಪಟ್ಟದಪ್ಪನವರು - "ನೀವು ಮಹಾತ್ಮರಾದ ಸಿದ್ಧಾರೂಢ ಸ್ವಾಮಿಯವರ ನಿಂದಾ ಆಡಿದಿರಿ. ಆತನ ಕ್ಷೋಭದಿಂದ ಈ ಸ್ಥಿತಿ ಬಂದೊದಗಿತು, ಒಳ್ಳೇದು, ಈಗ ಅವರಿಗೆ ಶರಣು ಹೋಗಿ ದಯಾಳುವಾದ ಆ ಸದ್ಗುರುವಿಗೆ ಕ್ಷಮಾ ಬೇಡಿದ್ದಾದರೆ ನಿಮಗೆ ಕಲ್ಯಾಣವಾಗುವದು. ಇಲ್ಲದಿದ್ದರೆ ನೀವು ಮಹಾ ವಿಪತ್ತಿಗೆ ಗುರಿಯಾಗುವಿರಿ, ಇದು ನಿಶ್ಚಯವೆಂದು ತಿಳಿಯಿರಿ", ಅಂದರು. ಈ ವಚನವನ್ನು ಕೇಳಿ, ಮೂರು ಮಂದಿ ಅಯ್ಯನವರು ಪಟ್ಟದಪ್ಪನವರ ಹಿಂದೆ ಸ್ವಾಮಿಯವರ ಕಡೆಗೆ ಹೋಗಲಿಕ್ಕೆ ಹೊರಟರು. ಸಿದ್ಧರಿಗೆ ಘಾತ ಮಾಡಿದ ಆ ನಾಲ್ಕನೆಯವನು ಹಿಂದುಳಿದನು. ಮಠದ ಹೊರಗೆ ಭವ್ಯವಾದ ಹಂದರವು ನಿಂದಿರಿಸಿತ್ತು. ಅದರೊಳಗೆ ದಿವ್ಯವಾದ ಮಂಟಪವು ಶೋಭಿಸುತ್ತಿತ್ತು. ಅದನ್ನು ನೋಡಿದ ಆ ಮೂರು ಮಂದಿ ಅಯ್ಯನವರು ಅತ್ಯಾಶ್ಚರ್ಯಭರಿತರಾದರು. ಅದರ ಮಧ್ಯದಲ್ಲಿ ದಿವ್ಯತೇಜದಿಂದ ದೇದೀಪ್ಯಮಾನವಾದ ಸಿಂಹಾಸನದ ಮೇಲೆ ಸುಖಾಸೀನರಾಗಿದ್ದ ಸಿದ್ಧ ದಯಾಘನರನ್ನು ನೋಡಿದರು. ಸದ್ಗುರುಗಳ ಮಸ್ತಕದ ಮೇಲೆ ಕಿರೀಟ, ಕಂಠದೊಳಗೆ

ಮನೋಹರವಾದ ವೈಜಯಂತಿ ಮಾಲೆಯು ಶೋಭಿಸುತ್ತಿದ್ದವು. ದಿವ್ಯ ಪೀತಾಂಬರವನ್ನು ಮೈಮೇಲೆ ಹೊತ್ತಿದ್ದು, ಅದರ ಮೇಲೆ ಸುಂದರವಾದ ಪುಷ್ಪ ಹಾರವು ಒಪ್ಪುತ್ತಿತ್ತು. ಮುಖದ ಮೇಲೆ ದಿವ್ಯತೇಜದಿಂದ, ಇದು ಶಾಂತಿಯಿಂದಲೇ ಎರೆದಿರುವುದೋ ಎಂಬಂತೆ ಕಾಣಿಸುತ್ತಾ, ಆ ರೂಪ ನೋಡಿದ ಮಾತ್ರದಿಂದ ಚಿತ್ತವು ಶಾಂತವಾಗಿ ಕೂಡಲೇ ಆನಂದವು ಉಕ್ಕಿ ಬರುವುದು. ಸೂರ್ಯ ಕಿರಣಗಳು ಹೇಗೆ ತೇಜವನ್ನು ಸರ್ವತ್ರ ಹರಡುತ್ತವೆಯೋ ಹಾಗೆಯೇ ಆ ಮುಖದಿಂದ ಶಾಂತಿಕಿರಣಗಳು ಸುಖವನ್ನು ಪಸರಿಸುತ್ತ, ಭಕ್ತ ಜನರ ಚಿತ್ತವೃತ್ತಿಗಳನ್ನೆಲ್ಲಾ ಶಮನಮಾಡಿ ಅಲ್ಲಿ ಆನಂದವನ್ನು ತುಂಬುವವು. ದುಷ್ಟ ವೃತ್ತಿಗಳಿಗೆ ಸ್ಥಾನವಿಲ್ಲದಂತಾಗಿ, ಅವು ಅಡವಿ ಪಾಲಾಗಿ ಹೋಗುವುದು. ಅವುಗಳ ಸ್ಥಾನದಲ್ಲಿ ಅನುತಾಪವು ಪ್ರಾಪ್ತವಾಗಿ, ಚಿತ್ತವನ್ನು ನಿರ್ಮಲ ಮಾಡುವದು. ಆ ಮೂರು ಮಂದಿ ಅಯ್ಯನವರು ಆ ನೋಟವನ್ನು ನೋಡುತ್ತಾರೆ. ದಿವ್ಯತೇಜದಿಂದ ಮಂಡಿತರಾದ ಸಿದ್ಧಾರೂಢ ಮೂರ್ತಿಯನ್ನು ಕಣ್ಣು ಹಳಚದೆ ನೋಡಿ ನೋಡಿ, ಅವರ ವೃತ್ತಿ

ಅಲ್ಲೇ ಸ್ಥಿರವಾಗುವಂಥಾದ್ದಾಯಿತು. ಹೇಗೆ ಘೋರ ಅಂಧಕಾರವು ದಿಕ್ಕುಗಳಿಗೆಲ್ಲ ಮುಸುಕಿರುವಾಗ, ಅಕಸ್ಮಾತ್ತಾಗಿ ವಿದ್ಯುಲ್ಲತೆಯು ಝುಳಕಿಸಿತೆಂದರೆ, ಕ್ಷಣಮಾತ್ರ ಸೃಷ್ಟಿ ಇದ್ದಕ್ಕಿದ್ದಂತೆ ಕಾಣಿಸುವದೋ, ಅದರಂತೆಯೇ ಅವರ ಚಿತ್ತದಲ್ಲಿ ಆಯಿತು. ಘನವಾದ ಅಜ್ಞಾನ ತಮಸ್ಸಿನಿಂದ ಮುಸುಕಿದ ಅವರ ಚಿತ್ತದಲ್ಲಿ ಗುರುಕೃಪೆಯಿಂದ ಚಿಜ್ಯೋತಿ ಪ್ರಗಟವಾಗಿ ಸ್ವರೂಪಾನಂದವು ಪ್ರಕಟವಾಯಿತು. ಮತ್ತು ಅವಿದ್ಯೆಯು ನಷ್ಟವಾಯಿತು. ಸಿದ್ಧ ಮೂರ್ತಿಯ ದರ್ಶನವಾದ ಕೂಡಲೇ, ಮದ ಮತ್ಸರಾದಿ ದುರ್ಗುಣಗಳು ಓಡಿಹೋದವು, ಮತ್ತು ಸಿದ್ಧ ಚರಣಗಳಲ್ಲಿ ಮನಸ್ಸು ರಮಿಸುವಂಥಾದ್ದಾಗಿ, ಪೂರ್ವಸ್ಥಾನಕ್ಕೆ ತಿರುಗಿ ಬರಲಾರದಂತಾಯಿತು. ಆ ಅಯ್ಯನವರ ಚಿತ್ತವು ಅನುತಾಪವನ್ನು ಹೊಂದಿ, ಯಾವಾಗ ಸಿದ್ಧರ ಚರಣಗಳಿಗೆ ಬೀಳುವೆವು ಎಂದನ್ನುವರು. ಆಗ ಪಟ್ಟದಪ್ಪನವರು ಈ ಮೂರು ಮಂದಿ ಅಯ್ಯನವರನ್ನು ಬೆನ್ನ ಹಿಂದೆ ಕರಕೊಂಡು ಸಿದ್ಧರ ಸಮೀಪ ಹೋದರು. ಆಗ ಸದ್ಗುರುಗಳು ಪಟ್ಟದಪ್ಪನವರನ್ನು ಕಂಡು, ಬಹು ಅದರಿಂದ ಕೂಡ್ರಲಿಕ್ಕೆ ಹೇಳಿದರು. ಅವರು

ಸಿದ್ಧರಿಗೆ ನಮಸ್ಕರಿಸಿ ಕುಳಿತುಕೊಂಡರು. ಮತ್ತು ಈ ಅಯ್ಯನವರೂ ಸಿದ್ಧಾರೂಢರ ಚರಣಕ್ಕೆ ಬಿದ್ದರು. ಆಗ ಪಟ್ಟದಪ್ಪನವರು- "ಹೇ ಸಿದ್ಧರಾಯರೇ, ಈ ಮೂರು ಮಂದಿ ಅಯ್ಯನವರು ನಿಮಗೆ ಶರಣಾಗತರಾಗಿದ್ದಾರೆ. ಇವರ ಅಪರಾಧವನ್ನು ಕ್ಷಮಿಸಬೇಕು." ಎಂದು ಅವರ ವೃತ್ತಾಂತವನ್ನೆಲ್ಲಾ ನಿರೂಪಿಸಿದರು. ಆಗ ಪಟ್ಟದಪ್ಪನವರನ್ನು ಕುರಿತು ಸದ್ಗುರುಗಳು ಅನ್ನುತ್ತಾರೆ- "ಹೇ ಸ್ವಾಮೀ, ನಿಮಗೆ ಇವರು ತಮ್ಮ ಅಪರಾಧವನ್ನು ಹೇಳಿದ ಕೂಡಲೇ ಕ್ಷಮಾ ಮಾಡಿದಂತಾಯಿತು. ಈಗ ಅವರು ಮನಸ್ಸಿನಲ್ಲಿ ಶುದ್ಧರಾಗಿರುತ್ತಾರೆ', ಅನಂತರ ಮಹಾತ್ಮರು ತಮ್ಮ ಹಿಂದೆ ಕೈಹಾಕಿ,ಅಲ್ಲಿಂದ ನಾಲ್ಕು ಲಿಂಗ ಸಂಪುಷ್ಟಗಳನ್ನು ದಾರ ಸಮೇತವಾಗಿ ತಗೆದದ್ದನ್ನು ನೋಡಿ, ಅವರೆಲ್ಲರು ಅತ್ಯಾಶ್ಚರ್ಯಭರಿತರಾದರು. ಅವನು ಮುಂದೆ ಹಿಡಿದು ಸಿದ್ಧರಂದರು - "ಅಯ್ಯನವರೇ, ಇವು ನಿಮ್ಮವೋ ಏನು, ಚನ್ನಾಗಿ ನೋಡಿಕೊಳ್ಳಿರಿ. ಒಬ್ಬ ಹುಡುಗನಿಗೆ ಇವು ದಾರಿಯಲ್ಲಿ ಸಿಕ್ಕಿದ್ದವು. ಅವನು ಇಲ್ಲಿ ತಂದುಕೊಟ್ಟನು", ಎನ್ನುವ ಆ

ವಚನವನ್ನು ಕೇಳಿ ಆ ಮೂರು ಮಂದಿ ಅಯ್ಯನವರು ತಮ್ಮ ಸಂಪುಷ್ಟಗಳನ್ನು ಆರಿಸಿ ತಗೆದುಕೊಂಡು, ಬಹಳ ಆನಂದಭರಿತರಾಗಿ, ಸಿದ್ಧಾರೂಢರಿಗೆ ನಮಸ್ಕರಿಸಿ, ತಮ್ಮ ಕೊರಳಿಗೆ ಹಾಕಿಕೊಂಡು. ನಾಲ್ಕನೇದೊಂದು ಸಂಪುಷ್ಟ ಉಳಿಯಿತು. ಪಟ್ಟದಪ್ಪನವರು ಸಿದ್ಧರನ್ನು ಕುರಿತು - "ನಾನು ಹೋಗಿ ಆ ನಾಲ್ಕನೇ ಅಯ್ಯನನ್ನು ಕರೆದುಕೊಂಡು ಬರುವೆನು", ಎಂದು ಹೊರಟರು. ಇತ್ತ ಹಿಂದುಳಿದ ಆ ನಾಲ್ಕನೆ ಅಯ್ಯನು, ಬಾಕಿ ಮೂರು ಮಂದಿ ಅಯ್ಯನವರು ಸಿದ್ಧರ ಕಡೆಗೆ ಹೋಗುವಾಗ ತಾನು ಹೋಗಿ ಕ್ಷಮೆ ಬೇಡಲಿಕ್ಕೆ ನಾಚಿಕೆಪಟ್ಟು ಅಲ್ಲೇ ನಿಂತಿದ್ದನು. ಆ ಸಮಯದಲ್ಲಿ ಅಲ್ಲಿದ್ದ ಇತರ ಅಯ್ಯನವರು ಅವನಿಗೆ ಬಿರುನುಡಿಗಳಿಂದ ದೂಷಿಸುವದನ್ನು ಕೇಳಿ ಆತನು ಸಿಟ್ಟಿಗೆದ್ದು, ಅವರಲ್ಲಿ ಒಬ್ಬನಿಗೆ ಹೊಡೆದನು. ಆಗ ಅವರೆಲ್ಲರೂ ಕೂಡಿ ಆ ಸಿಟ್ಟಿನ ಅಯ್ಯನಿಗೆ ಹೊಡೆಯಲಾರಂಭಿಸಿದರು. ಇತರ ಜನರು ಕೂಡಿ, ಆ ಅಯ್ಯನ ಸುದ್ದಿ ಕೇಳಿ, ಎಲ್ಲರೂ ಅವನನ್ನು ಹೊಡೆಯತೊಡಗಿದರು. ಕೆಲವರು ಅವನನ್ನು ನೆಲಕ್ಕೆ ಹಾಕಿ ತುಳಿದು, ಕೆಲವರು ಅವನ

ಮೇಲೆ ಕಲ್ಲು ಒಗೆದು, ಅವನಿಗೆ ಅರ್ಧ ಜೀವ ಮಾಡಿ ಹಾಕುವಂಥವರಾದರು. ಅಷ್ಟರೊಳಗೆ ಆತನನ್ನು ಹುಡುಕುತ್ತ ಪಟ್ಟದಪ್ಪನವರು ಆ ಸ್ಥಾನಕ್ಕೆ ಪ್ರಾಪ್ತರಾಗಿ, ನೋಡುತ್ತ ನಿಂತಿರುವ ಜನರನ್ನು ಅತ್ತಿತ್ತ ಸೇರಿಸಿ, ಆ ಅಯ್ಯನ ಅವಸ್ಥೆ ನೋಡಿ ಏನು ಸಂಗತಿಯೆಂದು ನಿಂತಿರುವವರ ಹತ್ತಿರ ವೃತ್ತಾಂತವನ್ನು ಕೆಳಿ ತಿಳಿದುಕೊಂಡರು. ಆಗ ಆ ಅಯ್ಯನ ಮೇಲೆ ಬಹು ಅಂತಃಕರಣವುಳ್ಳವರಾಗಿ, ಆತನಿಗೆ ಕೈಯಿಂದ ಹಿಡಿದು ಎಬ್ಬಿಸಿ ನಿಂದಿರಿಸಿದರು. ಅಯ್ಯನ ಅಭಿಮಾನವೆಲ್ಲಾ ಹೋಗಿ, ಆತನಿಗೆ ಮಹಾ ಅನುತಾಪ ಹುಟ್ಟಿ,ಕಣ್ಣೊಳಗಿಂದ ನೀರು ಸುರಿಸುವಂಥವನಾಗಿ ಪಟ್ಟದಪ್ಪನವರ ಪಾದಕ್ಕೆ ಬಿದ್ದು ಅಂದನು, - “ನನ್ನ ಅಪರಾಧಗಳು ಸಂಖ್ಯೆ ಇಲ್ಲದಷ್ಟಾದವು. ಈಗ ನನ್ನನ್ನು ಸಿದ್ಧಾರೂಢರು ಇರುವಲ್ಲಿ ಕರೆದುಕೊಂಡು ಹೋಗಿರಿ. ನಾನು ಅವರ ಪಾದಕ್ಕೆ ಬಿದ್ದು, ನನ್ನ ಅಪರಾಧಗಳನ್ನು ಕ್ಷಮಿಸಬೇಕಾಗಿ ಪ್ರಾರ್ಥಿಸುವೆನು. ಆತನು ದಯಾಸಾಗರನಿದ್ದಾನೆ, ನನ್ನನ್ನು ತಾರಿಸೆಂದು

ಬೇಡಿಕೊಳ್ಳುವೆನು", ಪಟ್ಟದಪ್ಪನವರು ಆತನ ಅನುತಾಪವನ್ನು ಕಂಡು, ಈತನ ಅಭಿಮಾನವೆಲ್ಲಾ ಝಾಡಿಸಿಕೊಂಡು ಹೋಗಿದೆ, ಎಂದು ತಿಳಿದು, ಅಯ್ಯನನ್ನು ಕುರಿತು ಅನ್ನುತ್ತಾರೆ -

"ಸಿದ್ಧಾರೂಢರ ಸಮೀಪ ಹೋಗೋಣ ಆತನು ದೀನರಿಗೆ ಕೃಪಾದಾನಿ ಇರುತ್ತಾನೆ'. ಆಮೇಲೆ ಅಶಕ್ತನಾದ ಆ ಅಯ್ಯನಿಗೆ ಇಬ್ಬರು ರಟ್ಟೆಯನ್ನು ಹಿಡಿದುಕೊಂಡು, ಹಂದರದೊಳಗೆ ಸಿದ್ಧಾರೂಢರು

ಕುಳಿತಿರುವಲ್ಲಿ ಕರೆದುಕೊಂಡು ಹೋಗಿ, ಅವರ ಪಾದಕ್ಕೆ ಹಾಕಿದರು. ಆಗ ಪಟ್ಟದಪ್ಪನವರು ಆ ಅಯ್ಯನ ವೃತ್ತಾಂತವನ್ನೆಲ್ಲ ಸ್ವಾಮಿಯವರಿಗೆ ನಿರೂಪಿಸಿದರು. ಅದನ್ನು ಕೇಳಿ ಸಿದ್ಧರು ಆತನ ಮೇಲೆ ಅತ್ಯಂತ ಕೃಪಾಭರಿತರಾಗಿ, ಆ ಅಯ್ಯನಿಗೆ ಕೈ ಹಿಡಿದು ತನ್ನ ಸಮೀಪ ಕೂಡ್ರಿಸಿಕೊಂಡರು. ಆಗ ಪಟ್ಟದಪ್ಪನವರನ್ನು ಕುರಿತು ಸಿದ್ಧರು - "ನಮ್ಮ ದಯಾ ಕಾರ್ಯಕ್ಕೆ ಈತನು ಉತ್ತಮ ಪಾತ್ರನಿರುವನು. ಈತನಿಗೆ ಆರೋಗ್ಯವಾದದ್ದನ್ನು ನೋಡಿ, ನನಗೆ ಬಹಳ

ಆನಂದವಾಯಿತು. ಸ್ಥೂಲದೇಹಕ್ಕೆ ರೋಗಗಳು ಹ್ಯಾಗೆ ಪೀಡಿಸುವವೊ, ಹಾಗೆ ಸೂಕ್ಷ್ಮ ದೇಹಕ್ಕೆ ದುಃಸ್ವಭಾವಗಳೇ ರೋಗಗಳಾಗಿದ್ದು ಪೀಡಿಸುತ್ತಿರುವವು.

ರೋಗಿಯ ಮೇಲೆ ಎಲ್ಲರೂ ದಯಾವಂತರಿರುತ್ತಾರೆ. ಹಾಗೆಯೇ ಸಾಧುಗಳು ದುಷ್ಟರನ್ನು ಸಹಾ ರೋಗಿಗಳೆಂದು ಭಾವಿಸಿ, ಅವರ ಮೇಲೆ ದಯಾಭರಿತರಾಗಿರುತ್ತಾರೆ. ಆದ್ದರಿಂದ ಇತರರಿಗಿಂತಲೂ ದುರ್ಜನರನ್ನು ಅಧಿಕ ದಯೆಯಿಂದ ನಡಿಸತಕ್ಕದ್ದಾಗಿರುತ್ತದೆ. ಈಗ ಈ ಅಯ್ಯನು ಎಲ್ಲಾ ರೋಗವನ್ನು ಕಳಕೊಂಡ ಚಿತ್ತಾರೋಗ್ಯವನ್ನು ಪ್ರಾಪ್ತ ಮಾಡಿಕೊಂಡಿರುವನು," ಎಂದು ಸಿದ್ಧರಂದದ್ದು ಕೇಳಿ, ಆನಂದ ಭರಿತನಾಗಿ ಅಯ್ಯನು ಸಿದ್ಧಸ್ತುತಿಯನ್ನು ಮಾಡಲಾರಂಬಿಸಿ, ಅನ್ನುತ್ತಾನೆ - 'ಹೇ ಸಿದ್ದಾರೂಢನೇ, ದಯಾವಂತನೇ, ನಿನ್ನ ದರ್ಶನದಿಂದ ನಾನು ಆನಂದವನ್ನು ಹೊಂದಿದೆ, ಮತ್ತು ನನ್ನ ಹೃದಯದಲ್ಲಿ ಶಾಂತಿಯು ಉದಯವಾಗುವಂಥಾದ್ದಾಯಿತು. ಕೃಪಾಳುವಾದ ನೀನು ದಯೆ ತೋರಿಸದಿದ್ದರೆ, ನಾನು

ವ್ಯರ್ಥವಾಗಿ ನರಕದ ಪಥವನ್ನು ಹಿಡಿದು ಹೋಗುತ್ತಿದ್ದೆ. ನಿನ್ನನ್ನು ನಾನು ಥಳಿಸುತ್ತಿರುವಾಗ ನೀನು ನನ್ನನ್ನು ಉದ್ಧರಿಸಿದಿ, ಈಗ ನಿನ್ನ ಭಕ್ತರ ಪೈಕಿ ಒಬ್ಬನನ್ನಾಗಿ ನನ್ನನ್ನು ಪರಿಗಣಿಸು. ನಿನ್ನ ಚರಣಗಳಲ್ಲಿ ನಾನೊಬ್ಬ ದೀನನಿರುತ್ತೇನೆ. ನನ್ನನ್ನು ತ್ವರೆಯಿಂದ ಈ ಭವನದಿಯ ಪರತೀರಕ್ಕೆ ಕರಕೊಳ್ಳುವಂಥವನಾಗು. ದೇವನೇ, ನಾನು ನಿನ್ನ ದಾಸನಿದ್ದೇನೆ. ಈ ಕೃಪಾದಾನವನ್ನು ನನಗೆ ದಯಪಾಲಿಸು', ಹೀಗಂದಿದ್ದು ಕೇಳಿ ಸಿದ್ದರು, ಆತನ ಲಿಂಗಸಂಪುಷ್ಟವನ್ನು ತೆಗೆದು, ತಾವೇ ಆತನ ಕೊರಳಿಗೆ ಹಾಕಿ, ಬಹು ಪ್ರೇಮದಿಂದ ಆತನನ್ನು ಆಶೀರ್ವದಿಸಿದರು. ಆತನು ಮನಸ್ಸಿನಲ್ಲಿ ಪೂರ್ಣ ಶಾಂತಿಯನ್ನು ಹೊಂದಿದನು.

|| ಶ್ಲೋಕ || ಅಪಿಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್| ಸಾಧುರೇವಸ ಮಂತವ್ಯಃ ಸಮ್ಯಗ್ವ್ಯ ವಸಿತೋಹಿ ಸಃ || ಟೀಕಾ|| ಶ್ರೀಮದ್ ಭಗವದ್ಗೀತೆಯೊಳಗೆ ಶ್ರೀ ಕೃಷ್ಣನು ಅರ್ಜುನನಿಗೆ ಹೇಳುತ್ತಾನೆ - ಒಂದು ವೇಳೆ, ಮಹಾ ದುರಾಚಾರಿ ಇದ್ದಂಥವನು ಸಹಾ, ನನ್ನನ್ನು ಅನನ್ಯಭಾವದಿಂದ

ಭಜಿಸಿದನೆಂದರೆ, ಅವನು ಸಾಧು ಎಂತಲೇ ತಿಳಿದುಕೊಳ್ಳಬೇಕು. ಗೀತೆಯೊಳಗಿನ ಈ ಭಗವದ್ವಚನವು ಸಿದ್ಧ ಚರಣಗಳಲ್ಲಿ ಸತ್ಯವಾಯಿತು. ಶಿಲೆಯನ್ನು ಸಹಾ ಉದ್ಧಾರ ಮಾಡುವ ಶಕ್ತಿಯುಳ್ಳಂಥಾ ಆ ಚರಣಗಳಿಗೆ ಯಾವುದು ತಾನೇ ಅಸಾಧ್ಯವು.

ಹೇ ಶ್ರೋತಾಜನರುಗಳಿರಾ, ವೇದಾಂತ ಶ್ರವಣ ಮಾಡುತ್ತಿರುವ ಮುಮುಕ್ಷು ಜನರಿಗೆ ಗ್ರಾಹ್ಯವಾಗಿರುವ ಗಹನವಾದ ಲಕ್ಷಾರ್ಥವನ್ನು ಶ್ರವಣ ಮಾಡುವಂಥವರಾಗಿರಿ. ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರ, ಇವೇ ನಾಲ್ಕು ಮಂದಿ ಅಯ್ಯನವರೆಂದು ತಿಳಿಯತಕ್ಕದ್ದು, ಅವುಗಳ ಧರ್ಮಗಳೇ ಅವರ ವಕ್ಷಸ್ಥಳದ ಮೇಲೆ ಶೋಭಿಸುತ್ತಿದ್ದ ಲಿಂಗಗಳು. ಈ ನಾಲ್ಕು ಅಂತಃಕರಣಗಳು ಸಾಕ್ಷಿ ಚೈತನ್ಯವೆಂಬ ಸಿದ್ಧಗುರುವಿಗೆ ನಿಂದಿಸುತ್ತವೆ. ನಾಲ್ಕನೇ ಅಹಂಕಾರನು ಮಹಾ ದುರ್ಮತಿಯಾಗಿದ್ದು ಸಾಕ್ಷಿ ಚೈತನ್ಯಕ್ಕೆ ಘಾತಮಾಡುವನು. ಆ ಸಾಕ್ಷಿ ಚೈತನ್ಯವಾದ ಪ್ರತ್ಯಗಾತ್ಮನು ಪೂರ್ಣ

ದಯಾಳುವಾಗಿದ್ದು, ಇವರನ್ನು ಉದ್ಧಾರ ಮಾಡುವ ಸಂಧಿಯನ್ನು ನೋಡುತ್ತಿರುವನು, ಮತ್ತು ಆ ಕಾಲವು ಅಕಸ್ಮಾತ್ತಾಗಿ ಪ್ರಾಪ್ತವಾಯಿತು. ನಾಲ್ಕು ಮಂದಿ ಅಂತಃಕರಣಗಳು ಪ್ರತ್ಯಗಾತ್ಮನ ನಿರಾಕರಣರೂಪ ನಿಂದೆ ಮಾಡುತ್ತ ಇರುವಾಗ, ಆ ಆತ್ಮನು, ಅವುಗಳ ಧರ್ಮಗಳೆಂಬ ಲಿಂಗಗಳನ್ನು ಮಾಯೆಯಿಂದ ಹರಣಮಾಡುವಂಥವನಾದನು. ಹೀಗೆ ಅವರ ವೃತ್ತಿ ಕುಂಠಿತವಾಗಿರುವಾಗ ವಿವೇಕನೆಂಬ ಪಟ್ಟದಪ್ಪನು ಬಂದು, ಅಹಂಕಾರವನ್ನು ಬಿಟ್ಟು, ಬಾಕಿ ಮೂವರಿಗೆ ಪ್ರತ್ಯಗಾತ್ಮನ ದರ್ಶನ ಮಾಡಿಸುವಂಥವನಾದನು. ಆಮೇಲೆ ಅವರು ತಮ್ಮ ಸತ್ಯವಾದ ಧರ್ಮಗಳನ್ನು ನಿಜವಾಗಿ ತಿಳಿದ ಬಳಿಕ, ಅವರು ಸಂಸಾರದಲ್ಲಿ ಆತ್ಮ ಭಕ್ತಿಯಿಂದಲೇ ನಡೆಯುವಂಥವರಾದರು. ಆತ್ಮನ ನಿಷೇಧ ಎಂದು ಮಾಡದೆ, ಯಾವಾಗಲು ಆತ್ಮ ವಿಚಾರದಲ್ಲಿ ರತರಾಗಿರುತ್ತಿದ್ದರು.

ನಾಲ್ಕನೇಯವನಾದ ಅಹಂಕಾರನು, ಬಹಿರ್ಮುಖನಾಗಿರುತ್ತಾ, ಸ್ಥೂಲ ಧರ್ಮನಾಶದಿಂದ ಮ್ಲಾನವದನನಾಗಿದ್ದು, ಲಿಂಗದೇಹಾಭಿಮಾನದಿಂದ ಅಧಿಕ ಕ್ರೋಧಿಯಾಗಿ ನಿಃಶಂಕನಾಗಿದ್ದನು. ಆಗ ಆತ್ಮಕಾರವೃತ್ತಿಗಳು ಅವನಿಗೆ ಹೊಡಿಯುವಂಥವವಾಗಿ, ಪರೋಕ್ಷ ರೀತಿಯಿಂದ ಅವನು ಆತ್ಮ ಮಹಿಮೆಯನ್ನು ತಿಳಿದುಕೊಂಡನು. ಅದೇ ಸಮಯದಲ್ಲಿ ಅವರ ಕಡ ವಿವೇಕನು ಬರುವಂಥವನಾದನು. ವಿವೇಕನನ್ನು ಕಂಡ ಕೂಡಲೇ, ಅಹಂಕಾರನಿಗೆ ಅನುತಾಪ ಹುಟ್ಟಿ ತನಗೆ ಆ ಪ್ರತ್ಯಗಾತ್ಮನ ದರ್ಶನ ಮಾಡಿಸು , ಆತನಲ್ಲಿ ತಾನು ಲೀನವಾಗುವೆನೆಂದನು. ವಿವೇಕನು ಆತನನ್ನು ಆತ್ಮನ ಕಡೆಗೆ ಒಯ್ದು, ಆತ್ಮದರ್ಶನ ಮಾಡಿಸಿದನು. ಆಗ ಆತ್ಮನು ಆತನ ಮೇಲೆ ಬಹು ದಯವುಳ್ಳಂಥವನಾಗಿ, ಆ ಅಹಂಕಾರವನ್ನು ತನ್ನ ಅತ್ಯಂತ ಸಮೀಪದಲ್ಲಿ ಕೂಡ್ರಿಸಿಕೊಂಡನು. ಅಹಂಕಾರನಿಗೆ ಬಹಳ ಆನಂದವಾಯಿತು. ಆತನಾದರೂ ತನ್ನ ನಿಜವಾದ ಧರ್ಮವನ್ನು ತಿಳಿದು, ತನ್ನ ಭ್ರಮೆಯನ್ನೆಲ್ಲಾ ಕಳಕೊಂಡು, ಶ್ರಮವೆಲ್ಲಾ

ಸಾರ್ಥಕವಾಯಿತೆಂದು ತಿಳಿದುಕೊಂಡನು. ಆಮೇಲೆ ಆತ್ಮಾರಾಮನನ್ನು ಸ್ರವಿಸುವಂಥವನಾದನು. ಅಹಂಕಾರನ ಮೇಲೆ ಆತ್ಮನ ಅಧಿಕ ಕೃಪಾ ಇದ್ದು, ಇತರರರನ್ನೆಲ್ಲಾ ಹೊರಗೆಯೇ ಬಿಟ್ಟು, ಆತನನ್ನೇ ಬ್ರಹ್ಮಪರ್ಯಂತ ಕರೆದುಕೊಂಡು ಹೋಗುವನು. ಸದ್ಗುರುರಾಯನ ವರ್ತನವು ಸಗುಣ ಬ್ರಹ್ಮ ನಾಗಿದ್ದು, ಆತನನ್ನು ಹೃದಯದಲ್ಲಿ ನೋಡುವಾಗ, ಆತನೇ ನಿರ್ಗುಣನಾಗಿ ಕಾಣಿಸುವನು. ಈ ಪ್ರಕಾರ ಸದ್ಗುರುರಾಯನ ವರ್ತನವು ಸಗುಣ ನಿರ್ಗುಣವೆಂಬುದಾಗಿ ಉಭಯಾತ್ಮಕನಾಗಿರುವದು, ಆತನಿಗೆ ಅನನ್ಯಭಾವದಿಂದ ಶರಣು ಹೋಗುವದರಿಂದ ಆತನು ತನ್ನ ನಿಜವಾದ ಸ್ವರೂಪವನ್ನು ತೋರಿಸುವನು. ಈ ನಿರ್ವಿಕಾರ ಸ್ವರೂಪವನ್ನು ನೋಡಲಿಕ್ಕೆ ಹೋಗವಷ್ಟರಲ್ಲಿಯೇ ಅವಿದ್ಯೆಯು ನಷ್ಟವಾಗಿ ಹೋಗುವುದು. ಅವಿದ್ಯಾನಾಶದಿಂದ ಸಂಸಾರ ಭಯವು ತನ್ನಷ್ಟಕ್ಕೆ ನಾಶ ಹೊಂದಿ ಕ್ರಮೇಣ ಎಲ್ಲಾ ವೃತ್ತಿಗಳು ಲಯವಾಗಿ ಆ ನಿರಾಮಯವಾದ ಬ್ರಹ್ಮವು ಸ್ಥಿರವಾಗುವದು. ಹೇ ಕೃಪಾಳುವಾದ ಸದ್ಗುರುರಾಯನೇ, ನಿನ್ನ ಮಾಯೆಯನ್ನು

ನೀನೇ ಆವರಿಸಿಕೊಳ್ಳುವಂಥವನಾಗು. ನಿನ್ನ ಚರಣಗಳಿಗೆ ಶರಣು ಬಂದವರನ್ನು ಉದ್ಧಾರ ಮಾಡಲಿಕ್ಕೆ ನಿನಗೆ ಒಂದು ಕ್ಷಣ ಸಹ ಹತ್ತುವದಿಲ್ಲ. ನಿನಗೆ ಶರಣು ಬಂದಂಥಾ ನನ್ನನ್ನು ನೀನು ಕೃಪಾ ಕಟಾಕ್ಷದಿಂದ ಈಕ್ಷಿಸಿದಿಯೆಂದರೆ ನಾನು ಬೇಗನೇ ಈ ಸಂಸಾರ ಸಾಗರದಿಂದ ತಾರಣ ಹೊಂದುವೆನೆಂದು ನಿಶ್ಚಯವಾಗಿ ತಿಳಿಯುತ್ತೇನೆ. ಆದ್ದರಿಂದ ಹೇ ಸದ್ಗುರುರಾಯನೇ ಇದಕ್ಕಾಗಿ ಯಾತಕ್ಕೆ ವಿಳಂಬ ಮಾಡುತ್ತಿರುವಿ? ನಾನು ನಿನ್ನ ಚರಣಕ್ಕೆ ಶರಣು ಬಂದಿರುವೆನು, ಹೇ ದಯಾಳುವೇ ದೀನನಾದಂಥಾ ನನ್ನನ್ನು ರಕ್ಷಿಸು. ಯಾವದೊಂದು ವಿದ್ಯಾ, ವ ಕಳೆ ಇಲ್ಲದಿರುವಂಥಾ ನನ್ನನ್ನು ಈ ಗ್ರಂಥ ರಚನೆಗೋಸ್ಕರ ಯೋಜಿಸಿರುತ್ತಿ. ಲೋಕಸಂಗ್ರಹಾರ್ಥ ಈ ಯುಕ್ತಿ ಮಾಡಿ, ಸತ್ಯವಾಗಿ ನೀನೇ ಈ ಗ್ರಂಥವನ್ನು ಬರೆಯುತ್ತಿರುವಿ. ಹೇ ಶ್ರೋತಾ ಜನರುಗಳಿರಾ, ಮುಂದಿನ ಅಧ್ಯಾಯದೊಳಗಿನ ಅದ್ಭುತ ಕಥನವನ್ನು ಈಗ ಕೇಳುವಂಥವರಾಗಿರಿ. ಅದನ್ನು ಕೇಳಿದ ಮಾತ್ರದಿಂದ ಹೃದಯ ಗ್ರಂಥಿಗಳೆಲ್ಲಾ ನಾಶವಾಗಿ ಆನಂದ ಸ್ಥಾನವನ್ನು ನೀವು

ಹೊಂದುವಿರಿ. ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಅತಿ ಸುರಸವಾದ ಈ ಹದಿನೇಳನೇ ಅಧ್ಯಾಯವನ್ನು ಶಿವದಾಸನು ಶ್ರೀ ಸದ್ಗುರು ಸಿದ್ಧಾರೂಢರ ಚರಣಾರವಿಂದಗಳಲ್ಲಿ ಅರ್ಪಿಸುತ್ತಿರುವನು.